ಎಳೆಯರ ಆಮೋದ



# ಕೋಳಿ ಕೂಗು

ಮಲಗಿದ ಕೋಳಿಗೆ ಹೇಗೆ ಗೊತ್ತಾಗುತ್ತೆ
ಬೆಳಗಾಯಿತು ಅಂತ?

ಇನ್ನೊಂದ್ ಕೋಳಿ ಕೂಗುತ್ತಲ್ಲ
ಆವಾಗ್ ಗೊತ್ತಾಗುತ್ತೆ!

ಆ ಇನ್ನೊಂದ್ ಕೋಳಿಗೆ ಹೇಗೆ ಗೊತ್ತಾಗುತ್ತೆ
ಬೆಳಗಾಯಿತು ಅಂತ?

ಮತ್ತೊಂದ್ ಕೋಳಿ ಕೂಗುತ್ತಲ್ಲ
ಆವಾಗ್ ಗೊತ್ತಾಗುತ್ತೆ!

ಎಲ್ಲಾ ಕೋಳಿಗು ಮೊದಲಿನ ಕೋಳಿಗೆ
ಹೇಗೆ ಗೊತ್ತಾಗುತ್ತೆ
ಬೆಳಗಾಯಿತು ಅಂತ

ಗೌಡರ ಮನೆಯಲಿ ಅಲಾರಮ್ ಇರತ್ತೆ
ಅದು ಬಡಿದಾಗ ಗೊತ್ತಾಗತ್ತೆ
ಬೆಳಗಾಯಿತು ಅಂತ
ಟ್ರಿಣ್ ಟ್ರಿಣಾ ಟ್ರಿಣ್!

ಶೆಟ್ಟರ ಮನೆಯಲಿ ಗಡಿಯಾರ ಇರತ್ತೆ
ಅದು ಬಡಿದಾಗಲು ಗೊತ್ತಾಗುತ್ತೆ
ಬೆಳಗಾಯಿತು ಅಂತ
ಢಂ ಢಣಾ ಢಣ್!

ಬೆಂಗ್ಳೂರ್ ಎಕ್ಸ್‌ಪ್ರೆಸ್ ಬರುತಿರತೆ
ಆಗ ಗೊತ್ತಾಗತ್ತೆ
ಬೆಳಗಾಯಿತು ಅಂತ
ಕೂ ಕೂ ಕೂ!

ಕಟ್ಟಿದ ಕಂಜಿ ಕೂಗುತಿರತೆ
ಆಗ ಗೊತ್ತಾಗತ್ತೆ
ಬೆಳಗಾಯಿತು ಅಂತ
ಅಂಬಾ ಅಂಬಾ ಅಂಬಾ!